ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**651**
ಸದಸ್ಯರ ಹೆಸರು	:	ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	12-03-2020
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಗಳು

***

	ಪ್ರಶ್ನೆ	ಉತ್ತರ
ಅ)	ಕಳೆದ 03 ವರ್ಷಗಳಲ್ಲಿ ರಾಜ್ಯದಲ್ಲಿ ತೆರೆದ ವಿದ್ಯುತ್ ತಂತಿಗಳಿಂದ/ ಇನ್ನಿತರೆ ವಿದ್ಯುತ್ ಅವಘಡಗಳಿಂದ ಮೃತಪಟ್ಟವರ ಸಂಖ್ಯೆ ಎಷ್ಟು;	ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ವಿದ್ಯುತ್ ಸರಬರಾಜು ಕಂಪನಿ ಮತ್ತು ಕ.ವಿ.ಪ್ರ.ನಿ.ನಿ ವ್ಯಾಪ್ತಿಯಲ್ಲಿ ವಿದ್ಯುತ್ ತಂತಿಗಳಿಂದ ಹಾಗೂ ಇನ್ನಿತರ ವಿದ್ಯುತ್ ಅವಘಡಗಳಿಂದ ಒಟ್ಟು 1,809 ವ್ಯಕ್ತಿಗಳು ಮೃತಪಟ್ಟಿರುತ್ತಾರೆ.
ಆ)	ಇಂತಹ ವಿದ್ಯುತ್ ಅವಘಡಗಳನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;	ವಿದ್ಯುತ್ ಅವಘಡಗಳನ್ನು ತಡೆಯುವ ನಿಟ್ಟಿನಲ್ಲಿ ವಿದ್ಯುತ್ ಜಾಲದಲ್ಲಿನ ಅಪಾಯಕಾರಿ ಸ್ಥಳವನ್ನು ಗುರುತಿಸಿ ಅವುಗಳನ್ನು ಸರಿಪಡಿಸಲು ವಿದ್ಯುತ್ ಸರಬರಾಜು ಕಂಪನಿಗಳಿಂದ ಹಾಗೂ ಕ.ವಿ.ಪ್ರ.ನಿ.ನಿ. ವತಿಯಿಂದ ಈ ಕೆಳಕಂಡ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. ಹಳೆಯ ಶಿಥಿಲಗೊಂಡ ಹೆಚ್.ಟಿ/ಎಲ್.ಟಿ ವಾಹಕವನ್ನು ಹಂತಹಂತವಾಗಿ ಬದಲಾಯಿಸುವುದು. 2. ಜೋತು ಬಿದ್ದ ಮಾರ್ಗಗಳಿಗೆ ಮಧ್ಯಂತರ ಕಂಬಗಳನ್ನು ಅಳವಡಿಸುವುದು. 3. ಹಳೆಯ ತುಕ್ಕು ಹಿಡಿದ ಕಂಬಗಳನ್ನು ಬದಲಾಯಿಸುವುದು. 4. ವಿದ್ಯುತ್ ವಿತರಣಾ ಮಾರ್ಗಗಳಿಗೆ ತಾಗುತ್ತಿರುವ ಮರದ ಕೊಂಬೆಗಳನ್ನು ತೆರವುಗೊಳಿಸುವುದು. 5. ಎಲ್ಲಾ ಮಾರ್ಗದಾಳುಗಳಿಗೆ ಸುರಕ್ಷತಾ ಉಪಕರಣಗಳನ್ನು ನೀಡಿ, ಅವುಗಳನ್ನು ಕೆಲಸದ ವೇಳೆಯಲ್ಲಿ ಉಪಯೋಗಿಸಲು ಸೂಚಿಸಲಾಗಿದ್ದು, ಸುರಕ್ಷತೆಯ ಬಗ್ಗೆ ತಿಳುವಳಿಕೆ ನೀಡಲಾಗಿದೆ. ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣೆಯನ್ನು ಮಾಡಲಾಗುತ್ತಿದೆ. 6. ಹೊಸ ವಿದ್ಯುತ್ ಮಾರ್ಗ ಮತ್ತು ಪರಿವರ್ತಕ ಕೇಂದ್ರಗಳ ನಿರ್ಮಾಣದ ಸಮಯದಲ್ಲಿ ಭಾರತೀಯ ವಿದ್ಯುಚ್ಛಕ್ತಿ ನಿಯಮಗಳನ್ವಯ ನಿಗಧಿತ ಭೂ ಅಂತರ ಹಾಗೂ ಲಂಬಾಂತರವನ್ನು ಕಾಯ್ದು ಕೊಳ್ಳಲಾಗುತ್ತಿದೆ. 7. ಸಾಮಾನ್ಯವಾಗಿ ಪ್ರಕೃತಿ ವಿಕೋಪದಿಂದಾಗಿ ಉಂಟಾಗಬಹುದಾದ ವಿದ್ಯುತ್ ಅಪಘಾತಗಳನ್ನು ತಡೆಗಟ್ಟಲು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಚಿತ್ರಗಳನ್ನು ಪ್ರಚಲಿತ ದಿನಪತ್ರಿಕೆಗಳಲ್ಲಿ ಪ್ರಚಾರ ಮಾಡಲಾಗಿರುತ್ತದೆ. 8. ಭಾರತೀಯ ವಿದ್ಯುಚ್ಛಕ್ತಿ ನಿಯಮಗಳು/ಕಾಯ್ದೆಯನ್ನು ಉಲ್ಲಂಘಿಸಿ ನಿರ್ಮಿಸಿರುವ/ನಿರ್ಮಾಣ ಹಂತದಲ್ಲಿರುವ ಕಟ್ಟಡ/ಕಾಮಗಾರಿ, ವಿತರಣಾ ಮಾರ್ಗಗಳ ಕೆಳಗೆ/ಹತ್ತಿರ ಮರಗಿಡಗಳನ್ನು ಬೆಳೆಸಿರುವುದು ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ವಿತರಣಾ ಮಾರ್ಗಗಳಿಗೆ ಹಾನಿ ಮತ್ತು ಜೀವಕ್ಕೆ ಅಪಾಯ ತರುವಂತಹ ಸ್ಥಾವರಗಳನ್ನು ಗುರುತಿಸಿ, ಸಂಬಂಧಪಟ್ಟ ವಿದ್ಯುತ್ ಗ್ರಾಹಕರಿಗೆ ನೋಟೀಸ್ ನೀಡಿ, ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

....2

		9. ರಸ್ತೆ ಅಡ್ಡಲಾಗಿ ನಿರ್ಮಿಸಲಾದ ವಿದ್ಯುತ್ ಮಾರ್ಗಗಳು ಗಾರ್ಡಿಂಗ್ ವ್ಯವಸ್ಥೆ ಮಾಡಲಾಗುತ್ತಿದೆ. 10. ಕಿರಿದಾದ ರಸ್ತೆಗಳಲ್ಲಿ Aerial Bunched ಕೇಬಲ್ ಗಳನ್ನು ಅಳವಡಿಸಲಾಗುತ್ತಿದೆ. 11. ವಿತರಣಾ ಪರಿವರ್ತಕ ಕೇಂದ್ರಗಳ ಸುತ್ತ ಸುರಕ್ಷತಾ ಬೇಲಿಯನ್ನು ಅಳವಡಿಸಲಾಗುತ್ತಿದೆ. ರೇಡಿಯೋ, ದೃಶ್ಯಮಾಧ್ಯಮ ಹಾಗೂ ಶಾಲಾ-ಕಾಲೇಜುಗಳಲ್ಲಿ ಚಿತ್ರಕಲೆ/ಪ್ರಬಂಧ ಸ್ಪರ್ಧೆ ಏರ್ಪಡಿಸುವ ಮುಖಾಂತರ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ.
ಇ)	ಕಳೆದ 03 ವರ್ಷಗಳಲ್ಲಿ ವಿದ್ಯುತ್ ಅವಘಡದಲ್ಲಿ ಮೃತಪಟ್ಟವರ/ ಗಾಯಗೊಂಡವರಿಗೆ ನೀಡಲಾಗಿರುವ ಪರಿಹಾರದ ವಿವರಗಳನ್ನು ಒದಗಿಸುವುದು;	ಕಳೆದ 03 ವರ್ಷಗಳಲ್ಲಿ ವಿದ್ಯುತ್ ಅವಘಡದಲ್ಲಿ ಮೃತಪಟ್ಟ ವ್ಯಕ್ತಿಗಳ ವಾರಸ್ಸುದಾರರಿಗೆ ಹಾಗೂ ಗಾಯಗೊಂಡವರಿಗೆ ನೀಡಲಾಗಿರುವ ಪರಿಹಾರದ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.
ಈ)	ರಾಜ್ಯ ಸರ್ಕಾರ ವಿದ್ಯುತ್ ತಂತಿಗಳನ್ನು ನೆಲದೊಳಗೆ ಅಳವಡಿಸುವ ಯೋಜನೆ ಹಮ್ಮಿಕೊಳ್ಳುತ್ತಿದೆಯೇ, ಹಾಗಿದ್ದಲ್ಲಿ, ವಿವರವನ್ನು ಒದಗಿಸುವುದು?	ರಾಜ್ಯ ಸರ್ಕಾರದಿಂದ ನೆಲದೊಳಗೆ ವಿದ್ಯುತ್ ತಂತಿಗಳನ್ನು ಅಳವಡಿಸುವ (ಭೂಗತ ಕೇಬಲ್) ಯಾವುದೇ ಯೋಜನೆಗಳು ಜಾರಿಯಲ್ಲಿರುವುದಿಲ್ಲ. ವಿದ್ಯುತ್ ಸರಬರಾಜು ಕಂಪನಿಗಳು ತಮ್ಮ ಆಂತರಿಕ ಸಂಪನ್ಮೂಲ ಬಳಸಿ, ನಗರ ಪ್ರದೇಶಗಳಲ್ಲಿ ಹಂತ ಹಂತವಾಗಿ ಭೂಗತ ಕೇಬಲ್ ಅಳವಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ. ಕೇಂದ್ರ ಸರ್ಕಾರದ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆ (ಐ.ಪಿ.ಡಿ.ಎಸ್.) ಯಡಿ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ನೆಲದೊಳಗೆ ವಿದ್ಯುತ್ ತಂತಿಗಳನ್ನು ಅಳವಡಿಸುವ (ಭೂಗತ ಕೇಬಲ್) ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ವಿದ್ಯುತ್ ಸರಬರಾಜು ಕಂಪನಿವಾರು ಪ್ರಗತಿಯ ವಿವರಗಳು ಕೆಳಕಂಡಂತಿವೆ:-

ಕ್ರ ಸಂ.	ವಿದ್ಯುತ್ ಸರಬರಾಜು ಕಂಪನಿ	ಐ.ಪಿ.ಡಿ.ಎಸ್. ಯೋಜನೆ ಯಡಿಯಲ್ಲಿ ಅಳವಡಿಸಲಾಗಿರುವ ಕೇಬಲ್ ಗಳು (ಕಿ.ಮೀ.ಗಳಲ್ಲಿ)
1	ಬೆಸ್ಕಾಂ	954.08
2	ಮೆಸ್ಕಾಂ	165.73
3	ಸೆಸ್ಕ್	93.26
4	ಹೆಸ್ಕಾಂ	122.89
5	ಜೆಸ್ಕಾಂ	49.27
	ಒಟ್ಟು	**1385.23**

ಸಂಖ್ಯೆ: ಎನರ್ಜಿ 58 ಇಬಿಎಸ್ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಲಹರ್ ಸಿಂಗ್ ಸಿರೋಯಾ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 651ಕ್ಕೆ ಅನುಬಂಧ:-

ಕಳೆದ 3 ವರ್ಷಗಳಲ್ಲಿ ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಸಂಭವಿಸಿದ ವಿದ್ಯುತ್ ಅಪಘಾತಗಳಿಂದ ಮೃತಪಟ್ಟ ಮತ್ತು ಗಾಯಗೊಂಡ ವ್ಯಕ್ತಿಗಳ ಸಂಖ್ಯೆ ಮತ್ತು ನೀಡಲಾದ ಪರಿಹಾರದ ವಿವರಗಳು

ವರ್ಷ	ಮೃತಪಟ್ಟ ವ್ಯಕ್ತಿಗಳು		ಗಾಯಗೊಂಡ ವ್ಯಕ್ತಿಗಳು	
	ಮೃತಪಟ್ಟ ವ್ಯಕ್ತಿಗಳ ಸಂಖ್ಯೆ	ನೀಡಲಾದ ಪರಿಹಾರದ ಮೊತ್ತ (ರೂ.ಲಕ್ಷಗಳಲ್ಲಿ)	ಗಾಯಗೊಂಡ ವ್ಯಕ್ತಿಗಳ ಸಂಖ್ಯೆ	ನೀಡಲಾದ ಪರಿಹಾರದ ಮೊತ್ತ/ (ರೂ.ಲಕ್ಷಗಳಲ್ಲಿ)
2016–17	438	418.90	287	18.23
2017–18	428	368.12	337	30.69
2018–19	512	479.46	354	31.39
2019–20 (ಜನವರಿ 20ರ)	431	415.52	258	20.97
ಒಟ್ಟು	**1809**	**1682.00**	**1236**	**101.28**